**ಓ.ಎಸ್. ನಂಃ 94/2023**

**ಡಿ.ಡಬ್ಲ್ಯೂಃ 1**

**ದಿನಾಂಕ 18.08.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಕೆ.ಎಸ್.ಡಿ. ವಕೀಲರಿಂದಃ**

1. ದಾವಾ ಆಸ್ತಿಯ ಸುತ್ತ ಮುತ್ತಲು ನಮಗೆ ಸೇರಿದ ಪಿತ್ರಾರ್ಜಿತ ಆಸ್ತಿಗಳಿವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಸುತ್ತ ಮುತ್ತ ನಾನು ಖರೀದಿಸಿದ ಆಸ್ತಿಗಳಿಗೆ ಎಂದು ಸ್ವತಃ ನುಡಿದಿರುತ್ತಾರೆ. ನನ್ನ ತಂದೆಯರಿಗೆ ಸೇರಿದ್ದ ಸುಮಾರು 6 ಎಕರೆ ಪಿತ್ರಾರ್ಜಿತ ಆಸ್ತಿ ಇತ್ತು. ನನ್ನ ತಂದೆಯವರ ಸದರಿ 6 ಎಕರೆ ಪಿತ್ರಾರ್ಜಿತ ಆಸ್ತಿಯನ್ನು ನಾನು ಮತ್ತು ನನ್ನ ಅಣ್ಣ-ತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

2. ನನ್ನ ತಂದೆ-ತಾಯಿಯ ಮಕ್ಕಳ ಪೈಕಿ ನಾನು 2 ನೇಯ ಮಗ ಎಂದರೆ ಸರಿ. ನನ್ನ ಮತ್ತು ನನ್ನ ಅಣ್ಣ-ತಮ್ಮಂದಿರ ಮಧ್ಯ ಆದ ಪಾಲು ವಿಭಜನೆಯ ಪ್ರಕಾರ ಆಯಾ ಹಿಸ್ಸೆದಾರರ ಹಿಸ್ಸೆಗೆ ಹೋಗಿರುವ ಜಮೀನುಗಳನ್ನು ಆಯಾ ಹಿಸ್ಸೆದಾರರೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಸ್ವಯಾರ್ಜಿತ ಆಸ್ತಿಗಳನ್ನು ಖರೀದಿಸಿರುವ ಹಾಗೆ ವಾದಿಯು ಸಹ ಕೆಲವೊಂದು ಸ್ವಯಾರ್ಜಿತ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಮೊದಲು ನನ್ನ ಸ್ವಯಾರ್ಜಿತ ಆಸ್ತಿಗಳನ್ನು ಖರೀದಿಸಿದ್ದು, ಅದರ ನಂತರದಲ್ಲಿ ವಾದಿಯು ತಮ್ಮ ಸ್ವಯಾರ್ಜಿತ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ನುಡಿದಿರುತ್ತಾರೆ.

3. ನಾನು ಖರೀದಿಸಿರುವ ನನ್ನ ಸ್ವಯಾರ್ಜಿತ ಆಸ್ತಿಗಳಲ್ಲಿ ನಾನೇ ಸ್ವಾದೀನದಲ್ಲಿದ್ದು, ಪ್ರತಿವಾದಿಯು ಖರೀದಿಸಿರುವ ತಮ್ಮ ಸ್ವಯಾರ್ಜಿತ ಆಸ್ತಿಗಳಲ್ಲಿ ಪ್ರತಿವಾದಿಯೇ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿ. ನಾನು ಖರೀದಿಸಿರುವ ನನ್ನ ಸ್ವಯಾರ್ಜಿತ ಆಸ್ತಿಯ ಸರ್ವೇ ನಂಬರ್ 270/2 ಅಂತ ಇದ್ದು, ಅದರ ವಿಸ್ತೀರ್ಣ 22 ಗುಂಟೆ ಇರುತ್ತದೆ. ವಾದಿಯು ಖರೀದಿಸಿರುವ ತಮ್ಮ ಸ್ವಯಾರ್ಜಿತ ಆಸ್ತಿ ಸರ್ವೇ ನಂಬರ್ 270/3 ರಲ್ಲಿ ಇರುತ್ತದೆ ಎಂದರೆ ಸರಿ. ಸರ್ವೇ ನಂಬರ್ 270/3 ರಲ್ಲಿ ವಾದಿಯು 9 ಗುಂಟೆ ಜಮೀನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೇ

ನಂಬರ್ 270/3 ರಲ್ಲಿ ವಾದಿಯು 23 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

4. ನಾನು ಖರೀದಿಸಿದ ಸರ್ವೇ ನಂಬರ್ 270/2 ರ 22 ಗುಂಟೆ ಜಮೀನಿನ ಪಹಣಿಯು ನನ್ನ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸರ್ವೇ ನಂಬರ್ 270/3 ರಲ್ಲಿ ವಾದಿಯು ಖರೀದಿಸಿರುವ 23 ಗುಂಟೆ ಜಮೀನಿನ ಪೂರ್ತಿ ವಿಸ್ತೀರ್ಣದ ಪಹಣಿಯು ಒಟ್ಟಾಗಿ ವಾದಿಯ ಹೆಸರಿನಲ್ಲಿರುತ್ತದೆಯೋ ಅಥವಾ ಸದರಿ 23 ಗುಂಟೆ ಜಮೀನು ಪ್ರತ್ಯೇಕವಾಗಿ 9 ಗುಂಟೆ ಹಾಗೂ 14 ಗುಂಟೆ ಅಂತ ಬೇರೆ ಬೇರೆ ಪಹಣಿಯಲ್ಲಿ ವಾದಿಯ ಹೆಸರಿಗೆ ನಮೂದಾಗಿರುತ್ತದೆಯೋ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 270/3 ರಲ್ಲಿ ವಾದಿಯು ಖರೀದಿಸಿರುವ ಪೂರ್ತಿ 23 ಗುಂಟೆ ಜಮೀನು ಒಂದೇ ಪೋಡುನಲ್ಲಿರುತ್ತದೆಯೋ ಅಥವಾ ಅದು ಬೇರೆ ಬೇರೆ ಪೋಡುಗಳಲ್ಲಿ ಇದೆಯೋ ಎಂದು ನನಗೆ ಗೊತ್ತಿಲ್ಲ.

5. ಸರ್ವೇ ನಂಬರ್ 270 ರಲ್ಲಿ ಒಟ್ಟು 6 ಪೋಡುಗಳು ಇದ್ದು, ಸರ್ವೇ ನಂಬರ್ 270/2 ರಲ್ಲಿ ಇರುವ ನನ್ನ ಜಮೀನನ್ನು ಹೊರತುಪಡಿಸಿ ಸರ್ವೇ ನಂಬರ್ 270 ರ ಉಳಿದ ಪೋಡುಗಳಲ್ಲಿ ಯಾವ ಹಿಡುವಳಿದಾರರಿಗೆ ಎಷ್ಟು ವಿಸ್ತೀರ್ಣದ ಜಮೀನುಗಳು ಇದೆ ಎಂದು ನನಗೆ ಗೊತ್ತಿಲ್ಲ. ವಾದಿಯು ಖರೀದಿಸಿರುವ 23 ಗುಂಟೆ ಜಮೀನು ಸರ್ವೇ ನಂಬರ್ 270/3 ರಲ್ಲಿ 9 ಗುಂಟೆ ಜಮೀನು ಹಾಗೂ ಸರ್ವೇ ನಂಬರ್ 270/4 ರಲ್ಲಿ 14 ಗುಂಟೆ ಜಮೀನಿನಂತೆ ಎರಡು ಪೋಡುಗಳಲ್ಲಿವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

6. ವಾದಿಯು ಸರ್ವೇ ನಂಬರ್ 270/3 ರಲ್ಲಿ ಖರೀದಿಸಿರುವ 23 ಗುಂಟೆ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ-ನನ್ನ ಜಮೀನು, ಪಶ್ಚಿಮಕ್ಕೆ-ನೀರು ಹರಿಯುವ ಹಳ್ಳ, ಉತ್ತರಕ್ಕೆ-ರಸ್ತೆ ಹಾಗೂ ದಕ್ಷಿಣಕ್ಕೆ-ನನ್ನ ಜಮೀನು ಅಂತ ಇರುತ್ತದೆ. ನಾನು ಈಗ ಹೇಳಿದ ಚೆಕ್ಕುಬಂಧಿ ಒಳಗಡೆ ಇರುವ ಸರ್ವೇ ನಂಬರ್ 270/3 ರ ಜಮೀನನ್ನು ವಾದಿಯು ದಿನಾಂಕ 26.05.2011 ರಂದು ಚೆನ್ನೇಗೌಡ ಬಿನ್ ನಂಜುಂಡೇಗೌಡ ಹಾಗೂ ಅವರ ಮಕ್ಕಳಿಂದ ಖರಿದೀಸಿರುತ್ತಾರೆ ಎಂದರೆ ಸರಿ. ಸರ್ವೇ ನಂಬರ್ 270/3 ರಲ್ಲಿ 9 ಗುಂಟೆ ಜಮೀನು ಹಾಗೂ ಸರ್ವೇ ನಂಬರ್ 270/4 ರಲ್ಲಿ 14 ಗುಂಟೆ ಜಮೀನನ್ನು ಒಟ್ಟಿಗೆ ಒಂದೇ ಖರೀದಿ ಪತ್ರದಡಿಯಲ್ಲಿ ವಾದಿಯು ಖರೀದಿಸಿರುತ್ತಾರೆ

ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅವೆರಡು ಆಸ್ತಿಗಳಿಗೆ ಒಂದೇ ಚೆಕ್ಕುಬಂಧಿ ಎಂದು ನುಡಿದಿರುತ್ತಾರೆ.

7. ಈ ದಾವೆಯಲ್ಲಿ ತೋರಿಸಿರುವ ದಾವಾ ಆಸ್ತಿಯ ಚೆಕ್ಕುಬಂಧಿಗಳನ್ನೆ ತೋರಿಸಿ ಇದೇ ವಾದಿಯು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 330/2020 ರ ದಾವೆಯನ್ನು ಹೂಡಿದ್ದರು ಎಂದರೆ ಸರಿ. ದಾವಾ ಆಸ್ತಿಯ ಖರೀದಿ ಪತ್ರದಲ್ಲಿ ಚೆಕ್ಕುಬಂಧಿಗಳು ತಪ್ಪಾಗಿ ನಮೂದಾಗಿರುವ ಕಾರಣ ದಿನಾಂಕ 19.12.2022 ರಂದು ವಾದಿಯು ತಮ್ಮ ಮಾರಾಟಗಾರರಿಂದ ತಿದ್ದುಪಡಿ ಕ್ರಯ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಯು ಸದರಿ ದಾಖಲೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

8. ವಾದಿಯು ಈ ದಾವೆಯಲ್ಲಿ ಯಾವ ಚೆಕ್ಕುಬಂಧಿಗಳನ್ನು ನಮೂದಿಸಿರುತ್ತಾರೆ ಎಂದು ನಾನು ನನ್ನ ವಕೀಲರಲ್ಲಿ ಕೇಳಿ ತಿಳಿದುಕೊಂಡಿರುತ್ತೇನೆ. ಸರ್ವೇ ನಂಬರ್ 270/3 ರ ಕೇವಲ 9 ಗುಂಟೆ ಜಮೀನಿನ ಸಂಬಂಧ ವಾದಿಯು ಈ ದಾವೆಯನ್ನು ಹೂಡಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಿ ನನ್ನ ಜಮೀನಿನ ಚೆಕ್ಕುಬಂಧಿಯನ್ನು ತೋರಿಸಿ ನನಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸರ್ವೇ ನಂಬರ್ 270/3 ರಲ್ಲಿ ನನಗೆ ಸೇರಿದ ಜಮೀನು ಇಲ್ಲ. ಸರ್ವೇ ನಂಬರ್ 270/3 ರ ಜಮೀನಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ.

9. ದಾವಾ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ-ನನ್ನ ಜಮೀನು ಇದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ-ಹಳ್ಳ ಇದೆ ಎಂದರೆ ಸರಿ. ಉತ್ತರಕ್ಕೆ-ವಾದಿಗೆ ಸೇರಿದ ಜಮೀನು ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಸರ್ವೇ ನಂಬರ್ 270/4 ಹಾಗೂ 270/1 ರ ಜಮೀನುಗಳು ಇದ್ದು, ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ದಾನ ಪತ್ರದ ಮೂಲಕ ಬಂದ 30 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ.

10. ಸರ್ವೇ ನಂಬರ್ 270 ರಲ್ಲಿ ಆದ ಪೋಡುಗಳನ್ನು ರದ್ದು ಮಾಡುವಂತೆ ಕೋರಿ ನಾನೇ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ. ನಾನು ಮೇಲ್ಮನವಿ ಸಲ್ಲಿಸಿದ ಬಳಿಕ

ಡಿ.ಡಿ.ಎಲ್.ಆರ್ ರವರ ಕಚೇರಿಯಿಂದ ಸರ್ವೇ ಮಾಡಲು ಬಂದಿದ್ದು, ಆಗ ಜಮೀನಿನಲ್ಲಿ ಭತ್ತ ಬೆಳೆದಿದ್ದ ಕಾರಣ ಇನ್ನೂ 15 ದಿನಗಳು ಕಳೆದ ನಂತರದ ಸರ್ವೇ ಮಾಡಲು ಬರುವುದಾಗಿ ಅಧಿಕಾರಿಗಳು ಹೇಳಿದ್ದು, ಅದರ ಮಧ್ಯದಲ್ಲಿ ವಾದಿಯು ದಾವೆಯನ್ನು ಹೂಡಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ನಾನು ಪೋಡು ರದ್ದು ಮಾಡಲು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಹಾಗೂ ನಾನು ಹೇಳಿದ ಹಾಗೆ ಡಿ.ಡಿ.ಎಲ್.ಆರ್ ರವರ ಕಚೇರಿಯಿಂದ ಸರ್ವೇ ಮಾಡಲು ಯಾರು ಸಹ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

11. ನಾನು ನನ್ನ ಸಹಿಯನ್ನು ಕನ್ನಡದಲ್ಲಿ ಮಾಡಿರುತ್ತೇನೆ. ಸಾಕ್ಷಿಗೆ ಈಗ ಅವರ ವಕಾಲತ್ತಿನಲ್ಲಿರುವ ಸಹಿಯನ್ನು ತೋರಿಸಿದ್ದು, ಅದನ್ನು ಸಾಕ್ಷಿಯು ನೋಡಿ ತನ್ನದೇ ಸಹಿ ಎಂದು ನುಡಿದಿರುತ್ತಾರೆ. ವಾದಿಯು ದಾವಾ ಆಸ್ತಿಯ ಹದ್ದು ಬಸ್ತು ಮಾಡಿಸಿಕೊಳ್ಳಲು ಸಲ್ಲಿಸಿದ ಅರ್ಜಿಗೆ ದಿನಾಂಕ 19.02.2019 ರಂದು ಸರ್ವೇ ಇಲಾಖೆಯವರು ಬಂದು ಹದ್ದು ಬಸ್ತು ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದು ನಾನು ಒಪ್ಪಿ ಸರ್ವೇಯರು ಮಾಡಿದ ಮಹಜರಿಗೆ ನನ್ನ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಸರ್ವೇ ಮಾಡಿದ ನಂತರದಲ್ಲಿ ದಾವಾ ಆಸ್ತಿ ಸರ್ವೇ ನಂಬರ್ 270/3 ಎಂದು ಹೊಸ ಸರ್ವೇ ನಂಬರ್ ಆಗಿರುತ್ತದೆ ಎಂದರೆ ಸರಿಯಲ್ಲ.

12. ಸರ್ವೇ ನಂಬರ್ 270/2 ರಲ್ಲಿ ಯಾರು ಸ್ವಾಧೀನದಲ್ಲಿದಾರೆ ಹಾಗೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಯಾರು ಇದ್ದಾರೆ ಎಂದು ವರದಿ ಸಲ್ಲಿಸಲು ನ್ಯಾಯಾಲಯದ ನಿಯೋಗಿಯನ್ನು ಆಯೋಜಿಸಲು ನನಗೆ ಯಾವುದೇ ತಕರಾರು ಇಲ್ಲ. ಸರ್ವೇ ನಂಬರ್ 270/2 ರ ನನ್ನ 22 ಗುಂಟೆ ಜಮೀನಿನ ಪೂರ್ವ ದಿಕ್ಕಿಗೆ ಇರುವ ನಾಲಾ ಏರಿಯ ಪಕ್ಕದಲ್ಲಿ ವಾದಿಗೆ ಸೇರಿದ 4 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೇ ನಂಬರ್ 270/5 ರಲ್ಲಿ ನನ್ನ ತಮ್ಮನಾದ ತಿಮ್ಮೇಗೌಡರಿಗೆ ಸೇರಿದ 6 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೇ ನಂಬರ್ 270/2 ರ ನನ್ನ 22 ಗುಂಟೆ ಜಮೀನಿನ ಪೂರ್ವ ದಿಕ್ಕಿಗೆ ಇರುವ ನಾಲಾ ಏರಿಯ ಪಕ್ಕದಲ್ಲಿರುವ ವಾದಿಗೆ ಸೇರಿದ 4 ಗುಂಟೆ ಜಮೀನಿನ ದಕ್ಷಿಣ ದಿಕ್ಕಿಗೆ ಸರ್ವೇ ನಂಬರ್ 347 ರ ಜಮೀನು ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

13. ಸರ್ವೇ ನಂಬರ್ 270/2 ಹಾಗೂ ಸರ್ವೇ ನಂಬರ್ 270/3 ರ ಆಸ್ತಿಗಳನ್ನು ಹೊರತುಪಡಿಸಿ ಸರ್ವೇ ನಂಬರ್ 270/6 ರ ವರೆಗೂ ನಿಮ್ಮ ಪಿತ್ರಾರ್ಜಿತ ಆಸ್ತಿಗಳಿವೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸರ್ವೇ ನಂಬರ್ 270/6 ರ ವರೆಗೆ ನಮ್ಮ ಪಿತ್ರಾರ್ಜಿತ ಆಸ್ತಿಗಳಿಲ್ಲ ಆದರೆ ನಮ್ಮ ಸ್ವಯಾರ್ಜಿತ ಆಸ್ತಿಗಳು ಇವೆ ಎಂದು ನುಡಿದಿರುತ್ತಾರೆ. ಸರ್ವೇ ನಂಬರ್ 270/6 ರ ಪಕ್ಕದಲ್ಲಿ ನಮ್ಮ ಪಿತ್ರಾರ್ಜಿತ ಆಸ್ತಿಗಳಿವೆ ಎಂದರೆ ಸರಿ. ಸರ್ವೇ ನಂಬರ್ 270/2 ರಲ್ಲಿ ಯಾರು ಸ್ವಾಧೀನದಲ್ಲಿದಾರೆ ಹಾಗೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಯಾರು ಇದ್ದಾರೆ ಎಂದು ಅಕ್ಕ-ಪಕ್ಕದ ಜಮೀನಿನವರನ್ನು ಕರೆದುಕೊಂಡು ಬಂದು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ.

14. ಸರ್ವೇ ನಂಬರ್ 270/6 ರ 30 ½ ಗುಂಟೆ ಜಮೀನು ನನಗೆ ಸೇರಿದ ಆಸ್ತಿ ಎಂದರೆ ಸರಿ. ಸರ್ವೇ ನಂಬರ್ 270/6 ರ 30 ½ ಗುಂಟೆ ಜಮೀನು ಇದ್ದ ಹಾಗೆ ಸರ್ವೇ ನಂಬರ್ 270/2 ರ 22 ಗುಂಟೆ ಜಮೀನು ಹಾಗೂ ದಾವಾ ಆಸ್ತಿ ಇವೆರಡು ಸಹ ಸಮಾನವಾಗಿ ಇರುವಂತಹ ಆಸ್ತಿಗಳು ಎಂದರೆ ಸರಿಯಲ್ಲ. ಸರ್ವೇ ನಂಬರ್ 270/6 ರ 30 ½ ಗುಂಟೆ ಜಮೀನಿನ ಉದ್ದದಷ್ಟೇ ಸರ್ವೇ ನಂಬರ್ 270/2 ರ 22 ಗುಂಟೆ ಜಮೀನಿನ ಉದ್ದ ಇರುತ್ತದೆ. ಸರ್ವೇ ನಂಬರ್ 270/2 ರ 22 ಗುಂಟೆ ಜಮೀನನ್ನು ಹೊರತುಪಡಿಸಿ ನನಗೆ ಸರ್ವೇ ನಂಬರ್ 270/3 ರ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರು ಸಹ ನಾನು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**